# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),

**ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102.**

॥ ಶಾರದಾ ಶಾರದಾಂಭೋಜ ವದನಾ ವದನಾಂಬುಜೇ
ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಃ ಸನ್ನಿಧಿಂ ಕ್ರಿಯಾತ್ ॥



**ಕರೆಯೋಲೆ**

ಪ್ರಿಯರೇ,

ಸ್ವಸ್ತಿ! ಶ್ರೀ ಸರ್ವಜಿತ್ ನಾಮ ಸಂ।ರದ ಕುಂಭ ಮಾಸ ದಿನ ೩೦ ಸಲುವ ಮೀನ ಸಂಕ್ರಮಣ
ತಾ.14-03-2008ನೇ ಶುಕ್ರವಾರ

## ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವವು

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

| **ವೈ. ಭುವನೇಂದ್ರರಾವ್** | **ಅಂಬಲಪಾಡಿ ಕೃಷ್ಣರಾವ್** | **ಸಿ.ಎಸ್.ರಾವ್** |
|---|---|---|
| ಕಾರ್ಯದರ್ಶಿ | ಗೌರವಾಧ್ಯಕ್ಷರು | ಅಧ್ಯಕ್ಷರು |

***ಕಾರ್ಯಕ್ರಮ ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ***

ಸಮಾಜಬಾಂಧವರು ಇದನ್ನೇ ಆಮಂತ್ರಣವೆಂದು ತಿಳಿಯಬೇಕಾಗಿ ವಿನಂತಿ

★★★★ ★★★★

ಶ್ರೀ ಶಾರದಾ ಮಾತೆಗೆ ಉಡಿಸಿದ ಸೀರೆಗಳನ್ನು ತಾ.14-03-2008ರಂದು ಹರಾಜು ಹಾಕಲಾಗುವುದು.
ಆಸಕ್ತರು ಭಾಗವಹಿಸಿ ಶ್ರೀದೇವಿಯ ಪ್ರಸಾದ ರೂಪದ ಸೀರೆಗಳನ್ನು ಕೊಂಡುಕೊಳ್ಳಬಹುದು.



**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)**

**ಕುಂಜಿಬೆಟ್ಟು, ಉಡುಪಿ - 2.**

**ಶ್ರೀ ಶಾರದಾ ದೇವಸ್ಥಾನದಲ್ಲಿ**

**ತಾ.06-03-2008ರಂದು ಮಂಗಳವಾರ**

**ಶ್ರೀ ಮಹಾಶಿವರಾತ್ರಿ ಪೂಜೆಯು**

ಜರಗಲಿರುವುದು.
ಬೆಳಿಗ್ಗೆ 9-00ಗಂಟೆಯಿಂದ
ನಡೆಯುವ ಪಾರಾಯಣ, ಏಕಾದಶ
ರುದ್ರಾಭಿಷೇಕ, ಭಜನೆ
ಮೊದಲಾದ ಕಾರ್ಯಕ್ರಮಗಳಲ್ಲಿ
ಸಮಾಜಬಾಂಧವರು ಭಾಗವಹಿಸಿ
ಶ್ರೀ ದೇವರಕೃಪೆಗೆ
ಪಾತ್ರರಾಗಬೇಕೆಂದು ವಿನಂತಿ.

**- ಕಾರ್ಯದರ್ಶಿ**


## ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ...

(...2ನೇ ಪುಟದಿಂದ)

ಅವರು ತಾ.03-02-2008ರಂದು ಉಡುಪಿಯ ಎಂ.ಜಿ.ಎಂ ಕ್ರೀಡಾಂಗಣದಲ್ಲಿ ನಡೆದ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದ ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷತೆಯನ್ನುವಹಿಸಿ ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಅತಿಥಿಗಳಾಗಿ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿಯ ವತಿಯಿಂದ ಮಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕರಾದ ಶ್ರೀ ಎಮ್.ಆರ್. ವಾಸುದೇವ್, ಶ್ರೀ ಚೇತನ್ ಶರ್ಮ, ಡಾ। ಎ.ಪಿ.ಕೃಷ್ಣ ಭಾಗವಹಿಸಿದ್ದರು.

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್, ಕಾರ್ಯದರ್ಶಿ ಶ್ರೀ ವೈ. ಭುವನೇಂದ್ರರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕ್ರೀಡಾ ವೇದಿಕೆಯ ಅಧ್ಯಕ್ಷರಾದ ಬಿ. ರಾಮಚಂದ್ರರಾವ್ ಸ್ವಾಗತಿಸಿ, ಅರವಿಂದ ಕುಮಾರ್ ಧನ್ಯವಾದ ನೀಡಿದರು. ಬಹುಮಾನ ವಿಜೇತರ ಪಟ್ಟಿಯನ್ನು ಟಿ. ವಿಶ್ವನಾಥ ಶ್ಯಾನುಭೋಗ್ ವಾಚಿಸಿದರು. ವೇಣುಗೋಪಾಲ್ ರಾವ್ ಕಾರ್ಯಕ್ರಮ ನಿರ್ವಹಿಸಿದರು.



**ಬಹುಮಾನಿತರ ವಿವರ :** ವಿನ್ನರ್-ಎನ್.ಐ.ಟಿ.ಕೆ. ಸುರತ್ಕಲ್, ರನ್ನರ್-ಉಡುಪಿ 'ಎ', ಸೆಮಿಫೈನಲ್ ಲೂಸರ್ 1) ಕೋಟೇಶ್ವರ 2) ಬೆಳ್ಳಂಗಡಿ-'ಎ'.

ಉತ್ತಮ ಎಸೆತಗಾರ-ಸ್ವರೂಪ್ (ಉಡುಪಿ ತಂಡ), ಉತ್ತಮ ದಾಂಡಿಗ-ಸಂದೀಪ್ (ಎನ್.ಐ.ಟಿ.ಕೆ.), ಸವ್ಯಸಾಚಿ-ಶ್ರೀವತ್ಸ (ಎನ್.ಐ.ಟಿ.ಕೆ).

ಜ್ಯೂನಿಯರ್ ಕ್ರಿಕೆಟರ್ ವಿನ್ನರ್ಸ್-ಬೆಳ್ತಂಗಡಿ ತಂಡ, ರನ್ನರ್-ಕರ್ವಾಲು ತಂಡ.

**ಮಹಿಳಾ ವೇದಿಕೆಯಿಂದ ವತಿಯಿಂದ ಒಳಾಂಗಣ ಕ್ರೀಡಾ ಸ್ಪರ್ಧೆಗಳು :**

ಮಹಿಳಾವೇದಿಕೆಯ ವತಿಯಿಂದ ಒಳಾಂಗಣ ಸ್ಪರ್ಧೆಗಳು ಅಂದು ಬೆಳಿಗ್ಗೆ 9-30ಕ್ಕೆ ಕು। ವೃಂದಾ ರಾವ್ ಇವಳ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ವೇದಿಕೆಯ ಹಿರಿಯ ಸದಸ್ಯರಾದ ಶ್ರೀಮತಿ ಪಿ. ಜಾನಕಿರಾವ್ ಜ್ಯೋತಿ ಬೆಳಗಿಸುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು.

ನಂತರ ಮಕ್ಕಳಿಗೆ, ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು ನಡೆಸಲ್ಪಟ್ಟಿತು. ಚಿಕ್ಕಮಕ್ಕಳು ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲದೆ ಮಹಿಳೆಯರು ಉತ್ಸಾಹದಿಂದ ಈ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಮಧ್ಯಾಹ್ನ ಊಟದವರೆಗೂ ನಡೆದ ಈ ಸ್ಪರ್ಧೆಗಳು ಎಲ್ಲರ ಮನರಂಜಿಸಿದವು. ಊಟದ ನಂತರ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್, ಕಾರ್ಯದರ್ಶಿ ಶ್ರೀ ವೈ. ಭುವನೇಂದ್ರ ರಾವ್, ಕ್ರೀಡಾ ವೇದಿಕೆಯ ಅಧ್ಯಕ್ಷರಾದ ಶ್ರೀ ದೇವದಾಸ್ ಶಾಸ್ತ್ರಿ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಗೀತಾ ಕೃಷ್ಣಕುಮಾರ್ ವೇದಕೆಯಲ್ಲಿ ಉಪಸ್ಥಿತರಿದ್ದು ಬಹುಮಾನ ವಿತರಿಸಿದರು. ಕೊನೆಯಲ್ಲಿ ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಭುವನೇಶ್ವರಿ ನಾಗರಾಜ್ ಧನ್ಯವಾದ ಅರ್ಪಿಸಿದರು.

**ಒಳಾಂಗಣ ಕ್ರೀಡಾ ಸ್ಪರ್ಧೆಯ ಫಲಿತಾಂಶ :**

1ನೇ ತರಗತಿಯ ಒಳಗಿನ ಮಕ್ಕಳು -ಚಾಕಲೇಟ್ ಹೆಕ್ಕುವುದು : 1) ಪ್ರಣಮ್ಯ ಭಂಡಿ 2) ಅನನ್ಯ ಶಾಸ್ತ್ರಿ

1 ರಿಂದ 3ನೇ ತರಗತಿ ವರೆಗೆ -ಬಾಸ್ಕೆಟ್‌ಗೆ ಬಾಲ್ ಹಾಕುವುದು : 1) ವಂದನಾ 2) ಶಮಾತ್ಮಿಕಾ

ಕಪ್ಪೆ ಜಿಗಿತ : 1) ವಂದನಾ 2) ಶಮಾತ್ಮಿಕಾ

4 ರಿಂದ 6ನೇ ತರಗತಿ-ಲಿಂಬೆ ಚಮಚ ಓಟ 1) ಸೌರವ್ ಶಾಸ್ತ್ರಿ 2) ಶ್ರಾವಣ ಕುಮಾರ್

ಬಟಾಟೆ ಓಟ-1) ಸೌರವ್ ಶಾಸ್ತ್ರಿ 2) ಶ್ರಾವಣ ಕುಮಾರ್

7 ರಿಂದ 10ನೇ ತರಗತಿ-ಸ್ಮರಣ ಶಕ್ತಿ ಸ್ಪರ್ಧೆ 1) ದೀಕ್ಷಾ 2) ರಶ್ಮಿ

ಮಣಿಪೋಣಿಸುವುದು : 1) ವಿಜೇತಾ 2) ಕಾವ್ಯ

ಮಹಿಳೆಯರಿಗಾಗಿ - ಸಂಗೀತ ಕುರ್ಚಿ 1) ಶ್ರೀ ಲತಾ ಪ್ರಕಾಶ್ ರಾವ್ 2) ಉಷಾರಾವ್

(5ನೇ ಪುಟಕ್ಕೆ ...)


ಶ್ರೀಶಾರದಾ ದೇವಸ್ಥಾನದಲ್ಲಿ
ತಾ.08-03-2008ರ ಶನಿವಾರ
ಸಂಜೆ ಗಂಟೆ 5-30ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**



**ಸಾಮೂಹಿಕ ಗಣಹೋಮ**

ಶ್ರೀಶಾರದಾ ದೇವಸ್ಥಾನದಲ್ಲಿ
ಪ್ರತಿ ತಿಂಗಳು
**ಸಂಕಷ್ಟಹರ ಚತುರ್ಥಿಯಂದು**
ನಡೆಯುತಿರುವ
**ಸಾಮೂಹಿಕ ಗಣೆಹೋಮವು**
ತಾ.24-02-2008ರಂದು ಮತ್ತು
ಮಾಚ್ ತಿಂಗಳಲ್ಲಿ
25-03-2008ರಂದು ನಡೆಯಲಿದೆ.
**ಗಣಹೋಮ ಸೇವಾ ಶುಲ್ಕ ರೂ.51/-**
ಗಣಹೋಮ ಸೇವೆ ನೀಡಲು
ಇಚ್ಛಿಸುವವರು ಶಾರದಾ ಮಂಟಪದ
ಮೆನೇಜರ್‌ರವರನ್ನು ಸಂಪರ್ಕಿಸಲು
ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O)**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## ಪೂರ್ಣಾವತಾರೀ ಶ್ರೀಕೃಷ್ಣ

(...2ನೇ ಪುಟದಿಂದ)

'ಉಂಡುಪವಾಸಿ, ಬಳಸಿ' ಬ್ರಹ್ಮಚಾರಿ' ಮುಂತಾದ ಬಿರುದುಗಳನ್ನು ಪಡೆದುದು ಕೇವಲ ಕೃಷ್ಣಾವತಾರದಲ್ಲಿ ಮಾತ್ರ. ಚೋರ, ಜಾರನೆಂದೂ, ಪೋರ-ಮಾರನೆಂದೂ ಹೆಸರು ಪಡೆದುದೂ ಇದರಲ್ಲೇ. ತನಗೆ ವಿಷಪೂರಿತವಾದ ಸ್ತನ್ಯಪಾನ ಮಾಡಿಸಿದ ಪೂತನಿಯನ್ನು ತನ್ನ 'ಮೂರನೆಯ ತಾಯಿ' ಎಂದು ಕೃಷ್ಣ ಕರೆದ. ಸೋದರ ಮಾವನೆಂದನಿಸದೆ ತಾಯ್ತಂದೆಯರನ್ನು ಪೀಡಿಸಿದ ಕಂಸನನ್ನು ಧ್ವಂಸ ಮಾಡಿದ ಚಿಕ್ಕ ಮಗುವಾಗಿದ್ದಾಗಲೇ ಮರಗಳ ಮಧ್ಯದಲ್ಲಿ ಒರಳನ್ನು ಎಳೆದು ಬೃಹತ್ ಗಾತ್ರದ ಮರಗಳನ್ನು ಕೆಡಹಿದ. ಮಣ್ಣು ತಿಂದ ಬಾಯನ್ನು ಅಗಲಿಸಿ ತಾಯಿಗೆ ಹದಿನಾಲ್ಕು ಲೋಕಗಳನ್ನು ತೋರಿಸಿದ. ನೂರಾರು ಮಂದಿ ರಕ್ಕಸರನ್ನು ಲೀಲಾಜಾಲವಾಗಿ ಕೊಂದು ಮುಗಿಸಿದ. ಕಿರುಬೆರಳಲ್ಲಿ ಬೆಟ್ಟವನ್ನೆತ್ತಿ ನಂದಗೋಕುಲವನ್ನು ರಕ್ಷಿಸಿದ. ಅಕ್ಷಯ ಪಾತ್ರೆಯ ಕೇವಲ ಒಂದಗುಳು ಅನ್ನವನ್ನು ತಿಂದು ಸಾವಿರಾರು ಮಂದಿ ಶಿಷ್ಯರಿಂದೊಡಗೂಡಿದ ದುರ್ವಾಸರು ತುಂಬಿದ ಹೊಟ್ಟೆಯಿಂದ ತೇಗುವಂತೆ ಮಾಡಿದ ತನ್ನನ್ನೇ ಧ್ಯಾನಿಸಿ ಬೊಬ್ಬಿಡುತ್ತಿದ್ದ ಪಾಂಚಾಲಿಯ 'ಸೀರೆ ಅಕ್ಷಯವಾಗಲಿ' ಎಂದು ವರವಿತ್ತ. ಜನ್ಮಾಂಧನಾದ ಧೃತರಾಷ್ಟ್ರನಿಗೆ ಮತ್ತವನ ಪರಿವಾರಕ್ಕೆ (ದುರ್ಯೋಧನನನ್ನು ಹೊರತು ಪಡಿಸಿ) ತನ್ನ ವಿಶ್ವರೂಪವನ್ನೇ ತೋರಿದ. ಅರ್ಜುನನಿಗೆ ಜಗತ್ತಿನಲ್ಲೇ ಉತ್ಕೃಷ್ಟವೆನಿಸಿದ 'ಭಗವದ್ಗೀತೆ'ಯನ್ನು ಬೋಧಿಸಿದ.

ಪಾಂಡವರ ರಾಜಸೂಯಾಧ್ವರದಲ್ಲಿ ಆಗಮಿಸಿದ ಅತಿಥಿಗಳ ಪಾದಪ್ರಕ್ಷಾಲನಗೈದು ಉಪಚರಿಸಿದ. ಪಾರ್ಥನ ಅಶ್ವಗಳಿಗೆ ಆಹಾರವಿತ್ತು, ಬೆನ್ನು ಚಪ್ಪರಿಸಿ ಚಮ್ಮಟಿಗೆ ಹಿಡಿದು ಅವನ 'ಸಾರಥಿ'ಯಾದ ಬಾಲ್ಯ ಸ್ನೇಹಿತನಾದ ಸುದಾಮ (ಕುಚೇಲ)ನಿಗೆ ಸಕಲ ಸೌಭಾಗ್ಯಗಳನ್ನಿತ್ತ. ಏಕಕಾಲದಲ್ಲಿ ತನ್ನ ಹದಿನಾರು ಸಾವಿರದ ನೂರ ಎಂಟು ಸ್ತ್ರೀಯರ ಭವನಗಳಲ್ಲಿ ಕಾಣಿಸಿಕೊಂಡ. ಸಂಪೂರ್ಣ ನೂರ ಇಪ್ಪತ್ತಾರು ವರ್ಷಗಳ ಬದುಕನ್ನು ಸಾಗಿಸಿ ಸಾಮಾನ್ಯ ಮಾನವನಂತೆ ಬೇಡನೊಬ್ಬನ ಹುಲುಬಾಣದಿಂದ ಅವತಾರವನ್ನು ಮುಗಿಸಿದ - ಒಂದೇ ಎರಡೇ? ಈತನ ಪವಾಡಗಳು, ಅಸಾಮಾನ್ಯ ಕಾರ್ಯಗಳು ಇವನ ಅತಿ ಮಾನುಷತನವನ್ನು ಸಾರುತ್ತಿದೆ. ಕೆಲವು ಬಾರಿ ಸಾಮಾನ್ಯ ಮಾನವನಿಗಿಂತಲೂ ಕೀಳಾಗಿ ಕಾಣುತ್ತಿವೆ.

ವಿಷ್ಣುವಿನ ಇತರ ಯಾವುದೇ ಅವತಾರಗಳಲ್ಲಿ ಕಾಣಲಾಗದ ವಿಚಾರಗಳು ಕೃಷ್ಣಾವತಾರದಲ್ಲಿ ಕಂಡು ಬರುತ್ತವೆ. ಈತನ ಜನನವೇ ಕಾರಾಗೃಹದಲ್ಲಿ. ಹುಟ್ಟಿದಾಕ್ಷಣವೇ ಶಂಖ ಚಕ್ರ-ಗದಾ-ಪದ್ಮ ಪಾಣಿಯಾಗಿ ತಾಯಿ ತಂದೆಯರಿಗೆ ಕಾಣಿಸಿಕೊಂಡಿದ್ದಾನೆ. ಮುಂದೆ ಮನುಜ ಸಹಜವಾದ ಬಾಲ್ಯ, ಯೌವನ, ಪ್ರೌಢ-ಇತ್ಯಾದಿ- ಅವಸ್ಥಾಂತರಗಳಿಗೆ ಒಳಗಾಗಿದ್ದಾನೆ. ತನಗೆ ಬಂದಿದ್ದ 'ಚೋರತನ' (ಸ್ಯಮಂತಕ)ದ ಅಪವಾದವನ್ನು ಕಳೆಯಲು ಅವನು ಪಟ್ಟ ಪಾಡು ಅಷ್ಟಿಷ್ಟಲ್ಲ. ಈ ಮೇಲಿನವುಗಳಲ್ಲದೆ ನೂರಾರು ಉದಾಹರಣೆಗಳಲ್ಲಿ, ಸಾವಿರಾರು ಪುಟಗಳಲ್ಲಿ 'ಕೃಷ್ಣಾವತಾರ'ದ ವೈಶಿಷ್ಟ್ಯತೆ, ಮಹಿಮೆಗಳನ್ನು ವಿವರಿಸಬಹುದು.

''ಕೃಷ್ಣಾಯ ವಾಸುದೇವಾಯ ದೇವಕೀ ನಂದನಾಯಚ।
ನಂದಗೋಪ ಕುಮಾರಾಯ ಗೋವಿಂದಾಯ ನಮೋನಮಃ॥